# ಚೆಸ್‌ಬೋರ್ಡ್‌ನ ಹೊಸ ರಾಜ




■ ಪ್ರವೀಣ ಕುಲಕರ್ಣಿ

'ನಿನ್ನ ನೆಚ್ಚಿನ ಆಟಗಾರ ಯಾರು' ಎಂದು ದೇಶದ ಚೆಸ್ ಮೇಲಿನ ಪ್ರೀತಿಯ ಯಾವ ವ್ಯಕ್ತಿಯನ್ನು ಕೇಳಿದರೂ ಕಳೆದ ಮೂರು ದಶಕಗಳಿಂದ ಕೇಳಸಿಗುತ್ತಿದ್ದುದು ಒಂದೇ ಹೆಸರು – ಅದು ವಿಶ್ವನಾಥನ್ ಆನಂದ್ ಅವರದು. ಆದರೆ, ಈಗ ಭಾರತದ ಚೆಸ್ ಹೊನಲಿನಲ್ಲಿ ಹೊಸ ನೀರು ಜೋರಾಗಿ ಹರಿಯುತ್ತಿದೆ. ಹೊಸ ಹೊಸ ತಾರೆಗಳು ಮಿನುಗುತ್ತಿದ್ದಾರೆ. ಹಾಗೆ ಫಕ್ಕಂತ ಹೊಳೆದು ದೇಶದ ಚೆಸ್ ಪ್ರಿಯರ ಕಣ್ಮಣಿ ಎನಿಸಿರುವ ಯುವತಾರೆ ಡಿ. ಗುಕೇಶ್.

ಭಾರತದ ಚೆಸ್ ಕ್ರೀಡೆಯ ಅದ್ವಿತೀಯ ಸಾಮ್ರಾಟ ಎನಿಸಿದವರು ಆನಂದ್. ಕಳೆದ 37 ವರ್ಷಗಳಲ್ಲಿ ಭಾರತದ ನಂ. 1 ಆಟಗಾರನ ಪಟ್ಟವನ್ನು ಅವರು ಒಂದೇ ಒಂದು ಬಾರಿ, ಅದು ಅಲ್ಪ ಸಮಯದವರೆಗೆ (2016ರ ಮಾರ್ಚ್), ಪಿ. ಹರಿಕೃಷ್ಣ ಅವರಿಗೆ ಬಿಟ್ಟುಕೊಟ್ಟಿದ್ದರು. 1986ರ ಜುಲೈನಲ್ಲಿ ಶುರುವಾಗಿದ್ದ ಆನಂದ್ ಅವರ ಯಶಸ್ಸಿನ ಓಟ ಎಂದಿಗೂ ಮುಗ್ಗರಿಸಿದ್ದಿಲ್ಲ. ಅಂತಹ ಮಹಾನ್ ಆಟಗಾರನನ್ನೇ ಹಿಂದಿಕ್ಕಿ ಈಗ ಭಾರತದ ನಂ. 1 ಆಟಗಾರ ಎಂಬ ಪಟ್ಟಕ್ಕೆ ಏರಿದ್ದಾರೆ ಗುಕೇಶ್. ಭಾರತದ ನಾಲ್ಕು ದಶಕಗಳ ಚೆಸ್ ಚರಿತ್ರೆಯಲ್ಲಿ ಆನಂದ್ ಅವರು ಹಿಂದೆ ಸರಿದಿದ್ದು ಇದು ಕೇವಲ ಎರಡನೇ ಬಾರಿ. ಗುಕೇಶ್ ಸಾಧನೆ ಎಂತಹದ್ದು ಎನ್ನುವುದು ಅರಿವಿಗೆ ಬಂತಲ್ಲವೇ? ಕೇವಲ ಹದಿನೇಳರ ಹರೆಯದ ಗುಕೇಶ್ ಅವರ ಬತ್ತಳಿಕೆಯಲ್ಲಿ ಈಗ 2755.9 ಪಾಯಿಂಟ್‌ಗಳಿವೆ. 2754 ಪಾಯಿಂಟ್ ಹೊಂದಿರುವ ಆನಂದ್, ಮೊದಲ ಸ್ಥಾನವನ್ನು ಈ ಹುಡುಗನಿಗೆ ಬಿಟ್ಟುಕೊಟ್ಟು ದೇಶದ ಎರಡನೇ ಶ್ರೇಯಾಂಕದ ಆಟಗಾರರಾಗಿದ್ದಾರೆ.

ಹದಿಹರೆಯದಲ್ಲೇ ಸಾಧನೆಗಳ ಮೇಲೆ ಸಾಧನೆ ಮೆರೆಯುತ್ತಾ ಹೊರಟಿರುವ ಗುಕೇಶ್, ಭವಿಷ್ಯದ ಕ್ರೀಡಾ ಜೀವನದಲ್ಲಿ ದೊಡ್ಡ ಮೈಲುಗಲ್ಲುಗಳನ್ನು ಸ್ಥಾಪಿಸಬಲ್ಲಂತಹ ಆಟಗಾರ ಎಂಬ ವಿಶ್ಲೇಷಣೆಗೆ ಒಳಗಾಗುತ್ತಿದ್ದಾರೆ. ವಿಶ್ವದ ಮೊದಲ ಹತ್ತು ಶ್ರೇಯಾಂಕದಲ್ಲಿ ಸ್ಥಾನ ಪಡೆಯುವುದೆಂದರೆ ಅದು ಯಾವುದೇ ಚೆಸ್ ಆಟಗಾರನ ಪಾಲಿಗೆ ಬಹುದೊಡ್ಡ ಕನಸು. ಘಟಾನುಘಟಿ ಆಟಗಾರರ ನಡುವೆ ಆ ಸಾಧನೆ ಮಾಡುವುದು ಅಷ್ಟು ಸುಲಭವಲ್ಲ ಕೂಡ. ಆದರೆ, ಗುಕೇಶ್ ಈಗ ವಿಶ್ವದ ಒಂಬತ್ತನೇ ಶ್ರೇಯಾಂಕದ ಆಟಗಾರ ಎನಿಸಿದ್ದಾರೆ ('ಫಿಡೆ' ಶ್ರೇಯಾಂಕ ಇನ್ನೂ ಅಧಿಕೃತವಾಗಿ ಘೋಷಣೆಯಾಗುವುದು ಬಾಕಿ ಇದೆ). ಆನಂದ್, ಗುಕೇಶ್ ಅವರನ್ನು ಹೊರತುಪಡಿಸಿ ಮೊದಲ ಹತ್ತು ಶ್ರೇಯಾಂಕದೊಳಗೆ ಸ್ಥಾನ ಪಡೆದಿದ್ದ ಭಾರತದ ಇನ್ನೊಬ್ಬ ಆಟಗಾರನೆಂದರೆ ಅದು ಹರಿಕೃಷ್ಣ ಮಾತ್ರ. ಮ್ಯಾಗ್ನಸ್ ಕಾರ್ಲ್‌ಸನ್ ಅವರಂತಹ ಘಟಾನುಘಟಿ ಆಟಗಾರನನ್ನು ಸೋಲಿಸಿದ ಕಿರಿಯ ಎಂಬ ಹಿರಿಮೆಯೂ ಗುಕೇಶ್ ಅವರದಾಗಿದೆ. ಆಕ್ರಮಣಕಾರಿ ಆಟಗಾರ ಎನಿಸಿರುವ ಅವರು, ಹೆಚ್ಚು ರಿಸ್ಕ್ ತೆಗೆದುಕೊಂಡು ನಡೆಗಳನ್ನು ನಿರ್ಧರಿಸುತ್ತಾರೆ ಎಂದೂ ವಿಶ್ಲೇಷಿಸಲಾಗುತ್ತಿದೆ. ಪ್ರತಿದಿನ ಈ ಆಟಗಾರ ಹತ್ತು ಗಂಟೆ ಚೆಸ್ ಆಡುತ್ತಾರಂತೆ.

ಕಿವಿ, ಮೂಗು, ಗಂಟಲು ತಜ್ಞ ರಜನಿಕಾಂತ್ ಅವರ ಪುತ್ರನಾದ ದೊಮ್ಮರಾಜು ಗುಕೇಶ್, ಆರನೇ ವಯಸ್ಸಿನಲ್ಲೇ ಚೆಸ್ ಆಟಕ್ಕೆ ಮನಸೋತವರು. ದೇಶಿ ಚೆಸ್ ಟೂರ್ನಿಗಳಲ್ಲಿ ದಾಖಲೆಗಳ ಮೇಲೆ ದಾಖಲೆ ಬರೆಯುತ್ತಾ ಸಾಗಿದವರು. ಪ್ರಜ್ಞಾನಂದ, ನಿಹಾಲ್ ಸರೀನ್, ಭಾಸ್ಕರನ್ ಅಧಿಬನ್ ಮತ್ತು ಅರ್ಜುನ್ ಇರಿಗೇಶಿ ಅವರಂತಹ ಪ್ರತಿಭಾವಂತರು ಸಹ ಗುಕೇಶ್ ಅವರ ಸಮಕಾಲೀನರೇ ಆಗಿರುವುದು ದೇಶದ ಚೆಸ್ ಭವಿಷ್ಯದ ಕುರಿತು ಹೊಸ ಆಶಾಭಾವ ಮೂಡಿಸಿದೆ. ವಿಶ್ವದ ಮೊದಲ ಹತ್ತು ಶ್ರೇಯಾಂಕಿತರಲ್ಲಿ ಭಾರತದ ನಾಲ್ವರು ಇರುವುದು ಹೆಮ್ಮೆಯ ಸಾಧನೆಯೇ ಸರಿ. ಆನಂದ್ ಅವರ ತನಕ ದೇಶದಲ್ಲಿ ಒಬ್ಬರೇ ಒಬ್ಬ ಚೆಸ್ ಗ್ರ್ಯಾಂಡ್ ಮಾಸ್ಟರ್ ಇಲ್ಲದಿದ್ದ ಕಾಲಕ್ಕೆ ಹೋಲಿಸಿದರೆ ಈಗಿನ 'ಬೆಳೆ' ಶ್ರೀಮಂತವಾಗಿದೆ. ಕೊನೇರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ ಸಹ ಭಾರತದ ಮಹಿಳಾ ವಿಭಾಗದ ಚೆಸ್‌ಗೆ ಬಲ ತುಂಬಿದವರು. ಅಂದಹಾಗೆ, ಗುಕೇಶ್ ಸೇರಿದಂತೆ ಭಾರತದ ಹೊಸ ಚೆಸ್ ತಾರೆಗಳಿಗೆಲ್ಲ ಆನಂದ್ ಅವರೇ ಮಾರ್ಗದರ್ಶಕರು. ಶಿಷ್ಯನೊಬ್ಬ ತಮ್ಮನ್ನೇ ಮೀರಿ ನಿಂತಿದ್ದರಿಂದ ಆನಂದ್ ಅವರಿಗೇ ಹೆಚ್ಚಿನ ಖುಷಿಯಾಗಿದೆ.

'ಸಂಶಯವೇ ಇಲ್ಲ. ಭಾರತದ ಚೆಸ್ ಚರಿತ್ರೆಯಲ್ಲಿ ಇದೊಂದು ಐತಿಹಾಸಿಕ ಕ್ಷಣ. ನಾನೀಗ ಸೆಮಿ ರಿಟಾಯರ್ಡ್. ಹೀಗಿದ್ದೂ 37 ವರ್ಷಗಳ ಕಾಲ ಕಾಯ್ದುಕೊಂಡ ಪಟ್ಟ ಕಳೆದುಕೊಂಡಿರುವುದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಗುಕೇಶ್ ಎತ್ತರೆತ್ತರಕ್ಕೆ ಬೆಳೆಯುವುದರಲ್ಲಿ ಅನುಮಾನವೇ ಇಲ್ಲ. ಈ ಹುಡುಗನಿಗೆ ಮಾರ್ಗದರ್ಶನ, ಬೆಂಬಲ ಮಾಡುವ ಅವಕಾಶ ನನಗೆ ಸಿಕ್ಕಿದ್ದರಿಂದ ಸಂತೋಷ ಇನ್ನೂ ಹೆಚ್ಚಿದೆ. ಭಾರತದ ಚೆಸ್ ಭವಿಷ್ಯ ಭವ್ಯವಾಗಿದೆ' ಎಂದು ಆನಂದ್ ಹೇಳುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65